**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಸೇಡಂ**

**CC No.589-2024**

**(ಇಂದು ದಿಃ 21-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

| ಹೆಸರು ಶ್ರೀ/ಶ್ರೀಮತಿ | ಬಸವರಾಜ | CW-11 | PW-5 |
|---|---|---|---|
| ತಂದೆ/ಗಂಡನ ಹೆಸರು | ಮಾರುತಿ | | |
| ವಯಸ್ಸು | 53 ವರ್ಷ | | |
| ಉದ್ಯೋಗ | ಎಎಸಐ ದೇವಲಗಾಣಗಾಪುರ | | |
| ವಾಸ ಸ್ಥಳ | ದೇವಲಗಾಣಗಾಪುರ | | |

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭೀಯೋಜಕರಿಂದಃ-**

2016 ರಿಂದ 2021 ರವೆರೆಗೆ ನಾನು ಮುದೋಳ ಪೊ.ಠಾಣೆಯಲ್ಲಿ ಹೆಚ್ ಸಿ ಆಗಿ ಕಾರ್ಯನಿರ್ವಹಿಸುತ್ತಿದ್ದೆ. ದಿನಾಂಕ 21.05.2021 ರಂದು ಸಂಜೆ 05.00 ಗಂಟೆಗೆ ಚಾಸ-1 ರವರು ಠಾಣೆಗೆ ಬಂದು ನೀಡಿದ ದದೂರನ್ನು ಪಡೆದುಕೊಂಡು ಪ್ರಕರಣ ದಾಖಲು ಮಾಡಿರುತ್ತೇನೆ. ದೂರು ಮತ್ತು FIR ರನ್ನು ನೋಡಿ ಗುರುತಿಸಿದ್ದು , ಅವುಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ದಿನಾಂಕ 23.05.2021 ರಂದು ಗುನ್ನೆ ಸ್ಥಳದಲ್ಲಿ ಬೆಳಿಗ್ಗೆ 09.00 ರಿಂದ 10.00 ರ ಸಮಯದಲ್ಲಿ ಚಾಸಾ-8 ಮತ್ತು 9 ರ ಸಮಕ್ಷಮ ಗುನ್ನೆ ಸ್ಥಳ ಪಂಚನಾಮೆ ಕ್ರಮ ಜರುಗಿಸಿ ಒಂದು ಕಟ್ಟಿಗೆಯನ್ನು ವಶಪಡಿಸಿಕೊಂಡಿರುತ್ತೇನೆ. ಸದರಿ ಕಟ್ಟಿಗೆಯನ್ನು ಈಗಾಗಲೇ ಮು.ಮಾ. 1 ಎಂದು ಗುರುತಿಸಲಾಗಿದೆ. ದಿನಾಂಕ 23.05.2021 ರಂದು ಚಾಸಾ-2 ರಿಂದ 4 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿನಾಂಕ 29.05.2021 ರಂದು ಚಾಸ-10 ರವರಿಂದ ಗಾಯದ ಪ್ರಮಾಣ ಪತ್ರವನ್ನು ತೆಗೆದುಕೊಂಡಿರುತ್ತೆನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ-5 ಎಂದು ಗುರುತಿಸಲಾಯಿತು. ದಿನಾಂಕ 29.05.2021 ರಂದದು ಆರೋಪಿಗಳು ಠಾಣೆಗೆ ಬಂದದು

ಹಾಜರಾದ ಮೇರೆಗ ಅವರನ್ನು ಬಂಧಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 19.06.2021 ರಂದು ಆರೋಪಿಗಳ ವಿರುದ್ದ ನ್ಯಾಯಾಲಯಕ್ಕೆ ದೋಪ್ಪಾರೋಪಣ ಪತ್ರ ಸಲ್ಲಿಸಿದ್ದೇನೆ.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.**

**ಪಾಟೀ ಸವಾಲುಃ- ಶ್ರೀ GPR ವಕೀಲರಿಂದಃ**

ಚಾಸಾ-1, 2, 4 ಒಂದೇ ಕುಟುಂಬದ ಸದಸ್ಯರು ಎಂದರೆ ಸರಿ. ಪಂಚನಾಮೆ ಗೆ ಬರುವಂತೆ ಚಸಾ-8 ಮತ್ತು 9 ಕ್ಕೆ ನೋಟಿಸ್ ನೀಡಿಲ್ಲ, ಮು.ಮಾ. 1 ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ದಿನಾಂಕ 21.05.2021 ರಂದು ಸಂಜೆ 05.00 ಗಂಟೆಗೆ ಚಾಸ-1 ರವರು ಠಾಣೆಗೆ ಬಂದು ನೀಡಿದ ಸುಳ್ಳು ದೂರನ್ನು ಪಡೆದುಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 23.05.2021 ರಂದು ಗುನ್ನೆ ಸ್ಥಳದಲ್ಲಿ ಬೆಳಿಗ್ಗೆ 09.00 ರಿಂದ 10.00 ರ ಸಮಯದಲ್ಲಿ ಚಾಸಾ-8 ಮತ್ತು 9 ರ ಸಮಕ್ಷಮ ಗುನ್ನೆ ಸ್ಥಳ ಪಂಚನಾಮೆ ಕ್ರಮ ಜರುಗಿಸಿ ಒಂದು ಕಟ್ಟಿಗೆಯನ್ನು ವಶಪಡಿಸಿಕೊಂಡಿರುತ್ತೇನೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 23.05.2021 ರಂದು ಚಾಸಾ-2 ರಿಂದ 4 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 29.05.2021 ರಂದು ಚಾಸ-10 ರವರಿಂದ ಗಾಯದ ಪ್ರಮಾಣ ಪತ್ರವನ್ನು ತೆಗೆದುಕೊಂಡಿರುತ್ತಿನೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರೋಪಿಗಳ ವಿರುದ್ದ ನ್ಯಾಯ ಾಲಯಕ್ಕೆ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ, ಸೇಡಂ.**